

# ನಡುವೆ ಸುಳಿವಾತ್ಮ...

**ಅಕ್ಕನ 'ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ' ಎಂಬ ಸಾಲನ್ನು ಆಧುನಿಕ ಸಂದರ್ಭದಲ್ಲಿಟ್ಟು ನೋಡುವ ಕಿರುಚಿತ್ರವಿದು.**

**■ ಗೌರಿ**

ಗಂಡು–ಹೆಣ್ಣು ಎನ್ನುವುದು ಸೃಷ್ಟಿಯ ಎರಡು ರೂಪಗಳಷ್ಟೆ. ಬಹುಸೂಕ್ಷ್ಮವಾಗಿ ನೋಡಿದರೆ ಇವೆರಡೂ ಒಂದಕ್ಕೊಂದು ವಿರುದ್ಧವೂ ಅಲ್ಲ, ಪೂರ್ತಿ ಭಿನ್ನವೂ ಅಲ್ಲ. ಗಂಡಿನೊಳಗೆ ಹೆಣ್ಣಿನ ಅಂಶಗಳೂ, ಹೆಣ್ಣಿನೊಳಗೆ ಗಂಡಿನ ತಂತುಗಳೂ ಇದ್ದೇ ಇರುತ್ತವೆ. ಪ್ರಕೃತಿಸಹಜವಾಗಿಯೇ ಇರುವ ಈ ಬೆರಕೆಯನ್ನು ಮರೆಮಾಚುವುದು ನಮ್ಮ ಸಂಸ್ಕೃತಿ. ತನ್ನ ಚಲನೆಯುದ್ದಕ್ಕೂ ಸಂಸ್ಕೃತಿ ಗಂಡು ಮತ್ತು ಹೆಣ್ಣು ಪೂರ್ತಿ ಬೇರೆ ಬೇರೆಯೇ ಎಂದೂ ಪರಸ್ಪರ ವಿರುದ್ಧವೂ ಹೌದು ಎಂದೂ ಜನರ ಮನಸಲ್ಲಿ ಕೂರಿಸುತ್ತಲೇ ಬಂದಿದೆ. ಹಾಗಾಗಿಯೇ 'ಒಳಗೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ' ಎಂಬ ಮಾತನ್ನು ಶತಮಾನಗಳಿಂದ ಕೇಳಿಕೊಂಡು ಬಂದಿದ್ದರೂ, ಗಂಡೂ ಅಲ್ಲದ ಹೆಣ್ಣೂ ಅಲ್ಲದ ವ್ಯಕ್ತಿಗಳನ್ನು ಮನಸಾರೆ ಒಪ್ಪಿಕೊಳ್ಳಲು ನಮ್ಮ ಸಮಾಜಕ್ಕೆ ಇನ್ನೂ ಸಾಧ್ಯವಾಗಿಲ್ಲ.

ಲೈಂಗಿಕತೆ ಎನ್ನುವುದನ್ನೂ ನಾವು ಗಂಡುತನ ಅಥವಾ ಹೆಣ್ಣುತನವನ್ನು ಅಭಿವ್ಯಕ್ತಿಸುವ ದಾರಿಯಾಗಿಯೇ ಕಾಣುತ್ತ ಬಂದಿದ್ದೇವೆ. ಶತಮಾನಗಳಿಂದ ಬಂದಿರುವ ಈ ಸವೆದ ಗೋಡೆಯನ್ನು ಮುರಿಯುವ ಪ್ರಯತ್ನ 'ಎನಿಥಿಂಗ್ ಫಾರ್ ಯು' ಕಿರುಚಿತ್ರದಲ್ಲಿ ಮ್ಯಾಟ್ ಫರುಕ್ಕಿ ಮಾಡಿದ್ದಾರೆ. ತನ್ನ ಸಂಚಲನಕಾರಿ ವಸ್ತುವಿನಿಂದಷ್ಟೇ ಅಲ್ಲ, ಶಿಲ್ಪದ ದೃಷ್ಟಿಯಿಂದಲೂ ಈ ಕಿರುಚಿತ್ರ ಗಮನಾರ್ಹ ಪ್ರಯತ್ನವಾಗಿದೆ.

ಹನ್ನೊಂದು ನಿಮಿಷದ ಈ ಕಿರುಚಿತ್ರದ ಬಹುತೇಕ ಭಾಗವನ್ನು ಸಂಭಾಷಣೆಯೇ ಆವರಿಸಿಕೊಂಡಿದೆ. ದೃಶ್ಯಮಾಧ್ಯಮದಲ್ಲಿ, ಅದರಲ್ಲಿಯೂ ಸಿನಿಮಾ ಮಾಧ್ಯಮದಲ್ಲಿ ಸಂಭಾಷಣೆ ಬಹುಮುಖ್ಯ ಅಂಶವಾದರೂ ಮಿತಿಮೀರಿದರೆ ಅದೇ ಶಾಪವೂ ಆಗಬಲ್ಲದು. ಇದು ಮಾತು ಅಥವಾ ಸಂಭಾಷಣೆಯನ್ನೇ ಆಧರಿಸಿದ ಕಿರುಚಿತ್ರವಾಗಿದ್ದರೂ ಶಿಲ್ಪದ ಹದ ಎಲ್ಲೂ ಕೆಟ್ಟಿಲ್ಲ ಎನ್ನುವುದು ವಿಶೇಷ. ಇದು ಒಂದು ಏಕಾಂಕವನ್ನು ಆಧರಿಸಿದ ಕಿರುಚಿತ್ರ.

**ಹೆಸರು:** ಎನಿಥಿಂಗ್ ಫಾರ್ ಯು
**ನಿರ್ದೇಶನ:** ಮ್ಯಾಟ್ ಫರುಕ್ಕಿ
**ಛಾಯಾಗ್ರಹಣ:** ಯೋಂಗ್ ಕಿಂಗ್
**ಸಂಕಲನ:** ಜಾಸೋನ್ ಬಾನೋರ್ಸ್ಕಿ
**ತಾರಾಗಣ:** ಅಲೇನ್ ಉಯ್ ಮತ್ತು ಸುಂಕೃಶ್ ಬಾಲ



ರಿಚರ್ಡ್ ಮತ್ತು ಜಾರ್ಜ್ ಒಂದು ಕ್ಲಬ್‌ನಲ್ಲಿ ಸೇರುತ್ತಾರೆ. ಅವರ ನಡುವಿನ ಮಾತುಕತೆಯಲ್ಲಿಯೇ ಈ ಚಿತ್ರ ವಿಸ್ತರಿಸಿಕೊಳ್ಳುತ್ತ ಹೋಗುತ್ತದೆ. ಆ ಇಬ್ಬರೂ ವಿವಾಹಿತರು. ಅಷ್ಟೇ ಅಲ್ಲ ತನ್ನ ಹೆಂಡತಿಯ ಜೊತೆಗೆ ಸುಖವಾದ ದಾಂಪತ್ಯ ಜೀವನ ನಡೆಸುತ್ತಿರುವವರು. ಆದರೆ ರಿಚರ್ಡ್ ಚಡಪಡಿಸುತ್ತಿದ್ದಾನೆ. ಅವನ ಮನಸ್ಸಿನ ಆಸೆಯನ್ನು ಹೇಗೆ ಹೇಳಿಕೊಳ್ಳುವುದು ಎಂದು ತಿಳಿಯದೇ ಒದ್ದಾಡುತ್ತಿದ್ದಾನೆ. ಕೊನೆಗೆ ಜಾರ್ಜ್, 'ನಾನು ನಿನಗೋಸ್ಕರ ಏನು ಬೇಕಾದರೂ ಮಾಡಬಲ್ಲೆ' ಎಂದು ಹೇಳಿದಾಗ, 'ನಾನು ನಿನ್ನ ಜೊತೆ ಮಲಗಬೇಕು' ಎಂದು ಹೇಳುತ್ತಾನೆ! ಜಾರ್ಜ್ ಕಂಗಾಲಾಗುತ್ತಾನೆ. ಅಲ್ಲಿ ಅವರ ನಡುವೆ, ಆಕರ್ಷಣೆ, ಲೈಂಗಿಕತೆ, ಸಾಮಾಜಿಕ ರಿವಾಜುಗಳು ಎಲ್ಲದರ ಬಗ್ಗೆಯೂ ಚರ್ಚೆ ನಡೆಯುತ್ತದೆ. ಎರಡು ವರ್ಷಗಳ ಹಿಂದೊಮ್ಮೆ ಕುಡಿದ ಮತ್ತಿನಲ್ಲಿದ್ದ ರಿಚರ್ಡ್‌ಗೆ ಜಾರ್ಜ್ ಚುಂಬಿಸಿದ್ದ ಎಂಬ ಸಂಗತಿಯೂ ಹೊರಗೆ ಬರುತ್ತದೆ. ತನ್ನನ್ನು ತಾನು ಶೇ 100 ಸ್ಟ್ರೈಟ್ ಎಂದು ಹೇಳಿಕೊಳ್ಳುವ ಜಾರ್ಜ್‌ನಿಗೆ ರಿಚರ್ಡ್‌ನೇ ಈ ಘಟನೆ ನೆನಪಿಸುತ್ತಾನೆ.

ಅವರ ಮಾತಿನಲ್ಲಿಯೇ ಇಬ್ಬರೂ ತಮ್ಮ ಹೆಂಡತಿಯರೊಂದಿಗೆ ಸುಖ ಸಂಸಾರ ಮಾಡುತ್ತಿದ್ದರೂ, ಅವರ ನಡುವೆಯೂ ಗುಪ್ತವಾಗಿ ಆಕರ್ಷಣೆ ಇದೆ ಎಂಬುದು ಜಾಹೀರಾಗುತ್ತದೆ.

ಮನುಷ್ಯನ ವ್ಯಕ್ತಿತ್ವದ ಮೂಲಸ್ವಭಾವದ ಬಗ್ಗೆ ಚರ್ಚಿಸುವ ಈ ಕಿರುಚಿತ್ರ ತಾಂತ್ರಿಕವಾಗಿಯೂ ಗಟ್ಟಿಯಾಗಿಯೇ ಇದೆ. ಸಂಭಾಷಣೆಗಳಲ್ಲಿಯೇ ಏಕತಾನಗೊಳ್ಳಬಹುದಾಗಿದ್ದ ಅಪಾಯವನ್ನು ಅಲೇನ್ ಉಯ್ ಮತ್ತು ಸುಂಕೃಶ್ ಬಾಲ ಇಬ್ಬರೂ ತಮ್ಮ ಸಶಕ್ತ ಅಭಿನಯದ ಮೂಲಕವೇ ತಪ್ಪಿಸಿದ್ದಾರೆ. ಅವರ ಮನಸ್ಸಿನ ತಳಮಳಗಳು ಕಣ್ಣುಗಳಲ್ಲಿ ವ್ಯಕ್ತವಾಗುವ ರೀತಿಯನ್ನು ಆ ಫ್ರೇಮಿನ ಬೆಳಕಿನ ವಿನ್ಯಾಸ ಇನ್ನಷ್ಟು ಪ್ರಖರಗೊಳಿಸಿದೆ.

ಒಟ್ಟಾರೆ ವಸ್ತುವಿನ ದೃಷ್ಟಿಯಿಂದಲೂ, ಶಿಲ್ಪದ ಕಟ್ಟುವಿಕೆಯ ದೃಷ್ಟಿಯಿಂದಲೂ ನೋಡಬಹುದಾದ ಕಿರುಚಿತ್ರವಿದು.

ಕಿರುಚಿತ್ರ ವೀಕ್ಷಣೆಗೆ https://bit.ly/3DYAsv3 ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.